ಓ ಎಸ್ ನಂಃ 487/2022
ಪಿಡಬ್ಲ್ಯೂ.1 (ಯಲ್ಲಪ್ಪಾ)

ದಿನಾಂಕ:29-08-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ **1** ರಿಂದ **5** ರವರ ಪರ ಶ್ರೀ ಎಂ ಬಿ ಎಚ್ ವಕೀಲರಿಂದಃ

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ವಾದಪತ್ರಕ್ಕೆ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿಯನ್ನು ನೀಡಿದ್ದಾರೆ ಎಂದರೆ 1 ನೇ ಪ್ರತಿವಾದಿ ನೀಡಿರುತ್ತಾರೆ. ಸಾಕ್ಷಿಯು ಮುಂದುವರೆದು ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆಂದು ಹೇಳುತ್ತಾರೆ. ಪ್ರಸ್ತುತ ದಾವೆಯಲ್ಲಿ ಯಾರು ಯಾರನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಮಾಹದೇವ ಮತ್ತು ಮಹಾದೇವಿಯವರನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆ. ಪ್ರಸ್ತುತ ದಾವೆಯನ್ನು ಮೇಲೆ ಹೇಳಿದ ಇಬ್ಬರ ವಿರುದ್ಧ ಮಾತ್ರ ಸಲ್ಲಿಸಿರುತ್ತಿರಾ ಎಂದರೆ ಇಬ್ಬರ ವಿರುದ್ಧ ಮಾತ್ರ ಸಲ್ಲಿಸಿರುತ್ತೇನೆ. ಕರಾರು ಪತ್ರವನ್ನು ಯಾರು ಬರೆದುಕೊಟ್ಟಿರುತ್ತಾರೆ ಎಂದರೆ 1 ಮತ್ತು 2 ಪ್ರತಿವಾದಿಗಳು ಬರೆದುಕೊಟ್ಟಿರುತ್ತಾರೆ. ಪ್ರತಿವಾದಿ 3 ರಿಂದ 5 ರವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರಿಂದ 5 ರವರ ವಿರುದ್ಧ ನಾನು ಯಾವುದೇ ಪರಿಹಾರ ಕೇಳಿಲಿಲ್ಲ ಎಂದರೆ ಸರಿ.

2. ನಾನು ಕರಾರು ಪತ್ರವನ್ನು ಹೊರತು ಪಡಿಸಿ ಪ್ರತಿವಾದಿ 1 ಮತ್ತು 2 ರವರ ಬಳಿ ಇನ್ನೊಂದು ವ್ಯವಹಾರ ಮಾಡಿದ್ದೇನೆಂದರೆ ಸರಿಯಲ್ಲ. ನಿಮಗೆ ಕನ್ನಡ ಓದಲು ಬರುತ್ತದೆ ಎಂದರೆ ಸರಿ. ಪ್ರತಿವಾದಿ 1 ಮತ್ತು 2 ರವರು ಮತ್ತು ನಾನು ಒಂದು ಒಪ್ಪಿಗೆ ಕರಾರು ಪತ್ರವನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಗೆ ಸಂಬಂಧಿಸಿದಂತೆ ಬೇರೆ ಕರಾರು ಪತ್ರವನ್ನು ಮಾಡಿಕೊಂಡಿರುವುದಿಲ್ಲ. ನಾನು ಮಣ್ಣಕೇರಿಯ ಸರ್ವೆ ನಂ.121/1 ಮತ್ತು ಸರ್ವೆ ನಂ.122/1 ಮತ್ತು 2 ರ ಜಮೀನುಗಳಿಗೆ ಸಂಬಂಧಿಸಿದಂತೆ ತಮ್ಮಣ್ಣ ದಾಸನಾಳ, ರವಿ ಉಪ್ಪಾರ, ಪಿ ಎಂ

ರುಮಾನಿ ಇವರ ಸಮ್ಮುಖದಲ್ಲಿ ಪ್ರತಿವಾದಿ 1 ಮತ್ತು 2 ರವರೊಂದಿಗೆ ವ್ಯವಹಾರ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಕಾಗದವನ್ನು ಮಾಡಿಕೊಂಡಿದ್ದು, ಅದನ್ನು ನೋಟರಿ ಮುಂದೆ ಹಾಜರು ಮಾಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಕರಾರಿನಂತೆ 1 ಎಕರೆ ಜಮೀನನ್ನು 6 ವರೆ ಲಕ್ಷ ರೂಗಳಿಗೆ ಖರೀದಿ ಮಾಡವುದಾಗಿ ನಾನು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ಕರಾರಿಗೆ ಸಂಬಂಧಿಸಿದಂತೆ 6 ಲಕ್ಷದ 90 ಸಾವಿರ ರೂಗಳನ್ನು ಪ್ರತಿವಾದಿ 1 ಮತ್ತು 2 ರವರಿಗೆ ನೀಡಿದ್ದೇನೆಂದರೆ ಸರಿಯಲ್ಲ. ಆ ಪೈಕಿ ತಲಾ 3 ಲಕ್ಷ ಹಣವನ್ನು ಪ್ರತಿವಾದಿ 4 ಮತ್ತು 5 ರವರ ಹೆಸರಿನಲ್ಲಿ ನಿಶ್ಚಿತ ಠೇವಣಿ ಇಡಲಾಗಿದೆ ಎಂದರೆ ಸರಿಯಲ್ಲ. ಮೇಲಿಂದ ಮೇಲೆ ನಾನು ಪ್ರತಿವಾದಿ 1 ಮತ್ತು 2 ರವರಿಗೆ ದಾವಾ ಆಸ್ತಿಯನ್ನು ಬರೆದುಕೊಡುವಂತೆ ಒತ್ತಾಯ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣದ ಭದ್ರತೆಗಾಗಿ ಮತ್ತು ಖರೀದಿ ಪತ್ರವನ್ನು ಬರೆದುಕೊಡುವವರೆಗೂ ಭದ್ರತೆಗಾಗಿ ಪ್ರತಿವಾದಿ 1 ಮತ್ತು 2 ರವರು ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಂತರದ ದಿನಗಳಲ್ಲಿ ಪ್ರತಿವಾದಿ 4 ಮತ್ತು 5 ರವರ ಹೆಸರಿನಲ್ಲಿ ಇಟ್ಟಿದ್ದ ನಿಶ್ಚಿತ ಠೇವಣಿ ಹಣವನ್ನು ನಾನೇ ಹಿಂದಕ್ಕೆ ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯವನ್ನು ಕೋರಿರುತ್ತಾರೆ. ಆದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶ್ರೀಮತಿ ದೀಪಾ ಜಿ.)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ